3903

Register Number | | | | | | |

# Language — KANNADA — Paper I

## ( Prose and Poetry )

Time Allowed : $2\frac{1}{2}$ Hours ] [ Maximum Marks : 100

I. ಈ ಕೆಳಗಿನವುಗಳಲ್ಲಿ ಯಾವುದಾದರೂ ಎಂಟು ಪ್ರಶ್ನೆಗಳಿಗೆ (ಪ್ರತಿಯೊಂದಕ್ಕೂ ಮೂರು ಸಾಲುಗಳಿಗೆ ಮೀರದಂತೆ) ಉತ್ತರಿಸಿ : $8 \times 2 = 16$

1) ಕೆರೆಗೆ ಯಾರನ್ನು ಹಾರವಾಗಿ ಕೊಡಬೇಕೆಂದು ನಿಷ್ಕರ್ಷೆ ಆಯಿತು ?

2) ಕರ್ನಾಟಕವನ್ನು ಆಳಿದ ರಾಜಮನೆತನಗಳು ಯಾವುವು ?

3) ರವೀಂದ್ರರ ಶಾಲಾ ಶಿಕ್ಷಣದ ಬಗ್ಗೆ ತಿಳಿಸಿ.

4) ಮಕರ ವಾನರನಲ್ಲಿ ಏನು ಹೇಳಿತು ?

5) ಮಂಥರೆ ಕೈಕೇಯಿಗೆ ನೀಡಿದ ಸಲಹೆ ಏನು ?

6) ಲಲಿತೆ ಏಕೆ ಅಳುತ್ತಿದ್ದಳು ?

7) ಶಿಕ್ಷಣದ ಮಹತ್ವವನ್ನು ಕುರಿತು ತಿರುವಳ್ಳುವರ್ ಏನು ಹೇಳಿದ್ದಾರೆ ?

8) ಐಯ್ಯಂಗಾರರು ಯಾರ ಮೇಲೆ ವಕ್ರವಾಗಿದ್ದರು ?

9) ವ್ಯಾಸಂಗದ ಹವ್ಯಾಸ ಅತಿಯಾದರೆ ಅದರ ಪರಿಣಾಮವೇನು ?

10) ಧೈರ್ಯದ ಬಗ್ಗೆ ಗಾಂಧೀಜಿ ಏನು ಹೇಳಿದರು ?

II. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ (ಪ್ರತಿಯೊಂದಕ್ಕೂ ಆರು ಸಾಲುಗಳಿಗೆ ಮೀರದಂತೆ) ಉತ್ತರಿಸಿ : $3 \times 5 = 15$

1) ಹಿಂದಿನ ಕಾಲದಲ್ಲಿ ನಿಸರ್ಗದ ಸಮತೋಲನ ಹೇಗೆ ನಡೆಯುತ್ತಿತ್ತು ?

2) ಷೇಕ್ಸ್‌ಪಿಯರನ ಉತ್ಸವದ ಬಗ್ಗೆ ಬರೆಯಿರಿ.

3) ತಂದೆ ತಾಯಿ ಭಾಗೀರಥಿಗೆ ಯಾವ ಭರವಸೆಯನ್ನು ಕೊಟ್ಟರು ?

4) ತಿರುವಳ್ಳುವರ್ ಮಾಲೈ ಎಂದರೇನು ?

5) ಯಜ್ಞದ ಪೂರ್ಣಾಹುತಿಗೆ ಮೊದಲು ನಡೆದ ಸಿದ್ಧತೆಗಳೇನು ?

[ Turn over

III. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ( 15 ಸಾಲುಗಳಿಗೆ ಮೀರದಂತೆ) ಉತ್ತರಿಸಿ : $1 \times 7 = 7$

1) ಭೂಮಿಯ ಪ್ರಳಯಕಾರಿ ಶಕ್ತಿಗಳು ಯಾವುವು ?

2) ಗೃಹಸ್ಥ ಧರ್ಮವನ್ನು ಕುರಿತು ತಿರುವಳ್ಳುವರ್ ಅವರ ಅಭಿಪ್ರಾಯವೇನು ?

3) 'ಕೆರೆಗೆ ಹಾರ' ಕನ್ನಡ ಕಾವ್ಯಶ್ರೀಯ ಕಂಠದ ಹಾರ. ಹೇಗೆ ?

4) ಕೈಕೇಯಿಯ ವರ್ತನೆಯಿಂದ ದಶರಥನ ಮೇಲಾದ ಪರಿಣಾಮವೇನು ?

IV. ಈ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : $5 \times 1 = 5$

1) ರಾಮಾಯಣ ದರ್ಶನಂ ಎಂಬ ಕಾವ್ಯವನ್ನು ಬರೆದವರು

ಅ) ರನ್ನ

ಆ) ಜನ್ನ

ಇ) ಕುವೆಂಪು

2) ರವೀಂದ್ರರಿಗೆ ನೊಬೆಲ್ ಪ್ರಶಸ್ತಿ ತಂದುಕೊಟ್ಟ ಕೃತಿ

ಅ) ಪ್ರೇಮಾಂಜಲಿ

ಆ) ಗೀತಾಂಜಲಿ

ಇ) ಬಾಷ್ಪಾಂಜಲಿ

3) ಆರೈಕೆ ಎಂಬುದರ ಅರ್ಥ

ಅ) ಹರಸು

ಆ) ಉಪಚಾರ

ಇ) ಉಪಟಳ

4) ರಾಯಲ್ ಷೇಕ್ಸ್‌ಪಿಯರ್ ಎಂಬುದು

ಅ) ವಿಮಾ ಕಂಪೆನಿ

ಆ) ಹೋಟೆಲ್

ಇ) ನಾಟಕ ಕಂಪೆನಿ

5) ತಿರುವಳ್ಳುವರ್ ಅವರ ಪತ್ನಿ

ಅ) ವಾಸಂತಿ

ಆ) ವಾಸುಕಿ

ಇ) ವಿಮಲ

V. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಎರಡು ಪುಟಗಳಷ್ಟು ಪ್ರಬಂಧವನ್ನು ಬರೆಯಿರಿ : $1 \times 10 = 10$

1) ತಿರುವಳ್ಳುವರ್

2) ಮಮತೆಯ ಸುಳಿ ಮಂಥರೆ

3) ಉಪಚಾರ

VI. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ (ಪ್ರತಿಯೊಂದಕ್ಕೂ ಮೂರು ಸಾಲುಗಳಿಗೆ ಮೀರದಂತೆ) ಉತ್ತರಿಸಿ : $5 \times 2 = 10$

1) ಯುಗಾದಿ ಹಬ್ಬದಂದು ಮನೆಯನ್ನು ಹೇಗೆ ಅಲಂಕರಿಸಬೇಕು ?

2) ಹೇಗೆಲ್ಲಾ ಒಂದಾಗೋಣ ಎಂದು ಕವಿ ಆಶಿಸಿದ್ದಾರೆ ?

3) ಪುಟ್ಟ ಹುಡುಗಿ ಕುರಿಮರಿಗೆ ಏನೆಂದು ಆಶ್ವಾಸನೆ ನೀಡಿದಳು ?

4) ಗೋವಿಂದ ಪೈಯವರು ಜನತೆಗೆ ಯಾವ ಕರೆಯನ್ನು ನೀಡಿದ್ದಾರೆ ?

5) ಕೈಲಾಸವು ಯಾವಾಗ ನೆರಮನೆ ಆಗುವುದು ?

6) ತನುಮನದ ಬಗ್ಗೆ ಅಲ್ಲಮನು ಹೇಳಿದ ವಿಚಾರಗಳೇನು ?

7) ಅರ್ಜುನನ ಸೇನೆ ಬಂದಾಗ ಬಭ್ರುವಾಹನನು ಏನು ಮಾಡಿದನು ?

VII. ಈ ಕೆಳಗಿನ ಪದ್ಯಭಾಗಗಳನ್ನು ಪೂರ್ತಿ ಮಾಡಿ : $2 \times 5 = 10$

1) ಕಪಟತನದಿ ..................................................

..................................................

..................................................

..................................................ವಿದ್ದರೇನು ಫಲ ?

2) ಅನ್ನವನು ..................................................

..................................................

.................................................. ಸರ್ವಜ್ಞ.

VIII. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರಕ್ಕೆ (ಪ್ರತಿಯೊಂದಕ್ಕೂ 6 ಸಾಲುಗಳು ಮೀರದಂತೆ) ಉತ್ತರಿಸಿ : $3 \times 5 = 15$

1) ದಾನದ ಮಹಿಮೆಯನ್ನು ವಿವರಿಸಿ.

2) ಕಾಡುಗಳ ಉಪಯೋಗವನ್ನು ಕವಿ ಹೇಗೆ ವರ್ಣಿಸಿದ್ದಾನೆ ?

3) ನಮ್ಮ ಸಂಸ್ಕೃತಿ ರಕ್ತಗತವಾದದ್ದು, ಅದು ನಮ್ಮನ್ನು ಬಿಟ್ಟು ಹೋಗುವುದಿಲ್ಲ ಎಂಬುದನ್ನು ಕವಿ ಹೇಗೆ ವಿವರಿಸಿದ್ದಾರೆ ?

4) ಕರ್ಣನ ದಾನ ಗುಣಗಳನ್ನು ಬರೆಯಿರಿ.

5) ಕುರಿಮರಿ ಮತ್ತು ಪುಟ್ಟ ಹುಡುಗಿಯ ಮಧ್ಯೆ ಬೆಳೆದ ಆತ್ಮೀಯ ಸಂಬಂಧವನ್ನು ವಿವರಿಸಿ.

[ Turn over

IX. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : $5 \times 1 = 5$

1) ಜಂಬೂಫಲ ಪದದ ಅರ್ಥ

ಅ) ವನಚರ

ಆ) ಮಾವಿನಕಾಯಿ

ಇ) ನೇರಳೆ ಹಣ್ಣು

2) ಜಟಾ ಪದದ ತದ್ಭವ ರೂಪ

ಅ) ಹೆಡೆ

ಆ) ಜಡೆ

ಇ) ಕೊಡೆ

3) ಪ್ರಾಚೀನ ಎಂಬುದರ ವಿರುದ್ಧ ಅರ್ಥ

ಅ) ವೇತನ

ಆ) ಸಾಧನ

ಇ) ನೂತನ

4) ಗತ್ಯಂತರ ಎಂಬುದು ಯಾವ ಸಂಧಿ ?

ಅ) ಗುಣ ಸಂಧಿ

ಆ) ಯಣ್ ಸಂಧಿ

ಇ) ಸವರ್ಣದೀರ್ಘ ಸಂಧಿ

5) 'ಬೆಟ್ಟದಾವರೆ' ಎಂಬುದು ಯಾವ ಸಮಾಸ ?

ಅ) ತತ್ಪುರುಷ

ಆ) ದ್ವಿಗು

ಇ) ಕರ್ಮಧಾರಯ

X. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ (15 ಸಾಲುಗಳು ಮೀರದಂತೆ) ಉತ್ತರಿಸಿ : $1 \times 7 = 7$

1) ವನಮಹೋತ್ಸವದ ಆಚರಣೆಯನ್ನು ಕುರಿತು ಬರೆಯಿರಿ.

2) ಯುಗಾದಿ ಕವಿತೆಯ ಸಾರಾಂಶ ಬರೆಯಿರಿ.

3) ಅಮ್ಮ, ಆಚಾರ, ನಾನು ಕವಿತೆಯ ಸಾರಾಂಶ ಬರೆಯಿರಿ.